# ಕೌಶಲ ಕಲಿಕೆ ಜೊತೆ ಖುಷಿ ಉಚಿತ

**ಸಣ್ಣ ಪುಟ್ಟ ಕೆಲಸಗಳಿಗೆ ಸಂಬಂಧಿಸಿದ ಕೌಶಲಗಳು ಜೀವನಪ್ರೀತಿಯನ್ನು ಹೆಚ್ಚಿಸಬಲ್ಲವು ಹಾಗೂ ಕೆಲಸದ ಪ್ರಕ್ರಿಯೆಯನ್ನು ಆನಂದಕರ ಆಗಿಸಬಲ್ಲವು.**

■ ಸ್ವಯಂಪ್ರಭಾ



ಜೀವನದಲ್ಲಿ ಹಣದ ಹರಿವು ಹೆಚ್ಚಿದಂತೆಯೇ ಮಕ್ಕಳಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುತ್ತೇವೆ. ಶಾಲೆಗೆ ತೆರಳಲು ಮತ್ತು ಮನೆಗೆ ಮರಳಲು ವ್ಯವಸ್ಥೆ, ಮನೆಯಲ್ಲಿ ಕೆಲಸಗಳ ನಿರ್ವಹಣೆಗೆ ತಕ್ಕ ವ್ಯವಸ್ಥೆ, ಪೆನ್ನು ಪೆನ್ಸಿಲ್ಲು ಪುಸ್ತಕಗಳನ್ನು ಸಾಕಷ್ಟು ಒದಗಿಸುವುದು, ಹೀಗೆ... ಮಕ್ಕಳಿಗೆ ಅಗತ್ಯವಾದುದನ್ನು ಒದಗಿಸುವುದು ಪೋಷಕರ ಮನದಲ್ಲಿ ಕೃತಾರ್ಥಭಾವ ಮೂಡುವುದು.

ಮೂವತ್ತೈದು ನಲವತ್ತರ ಆಸುಪಾಸಿನಲ್ಲಿರುವ ಇಂದಿನ ಬಹುತೇಕ ಅಪ್ಪಅಮ್ಮಂದಿರು 'ಅಭಾವದ ದಿನ'ಗಳನ್ನು ಕಂಡವರೇ ಆಗಿದ್ದಾರೆ. 'ಅಭಾವ' ಎಂದರೆ ಹಣದ ಕೊರತೆಯಿಂದಲೇ ಸೃಷ್ಟಿಯಾದ ಕೊರತೆಯಷ್ಟೇ ಅಲ್ಲ. ತಂತ್ರಜ್ಞಾನದ ಸವಲತ್ತು ಅಥವಾ ಪ್ಲಾಸ್ಟಿಕ್ ಆವಿಷ್ಕಾರ ಆಧರಿಸಿದ ಆಧುನಿಕತೆ ಇನ್ನೂ ಕಾಲಿಡದ ದಿನಗಳಲ್ಲಿ, ಒಂದಲ್ಲಾ ಒಂದು ವಿಚಾರಕ್ಕೆ ಅಭಾವ ಇದ್ದೇ ಇತ್ತು. ಆ ಕೊರತೆಗಳನ್ನು ದಾಟುವುದು ಹೇಗೆ ಅಥವಾ ಅವುಗಳೊಡನೆಯೇ ಬಾಳುವುದು ಹೇಗೆ ಎಂಬೊಂದು ಕೌಶಲವನ್ನು ಹಿರಿಯರು ಕಲಿತಿದ್ದರು. ಆದರೆ ಈಗಿನ ಎಳೆ ತಲೆಮಾರಿಗೆ ಆ ಕೌಶಲವನ್ನು ಕಲಿಯುವ ಅವಕಾಶ ಲಭ್ಯವಾಗಿಲ್ಲ.

ನಾವು ಅಕ್ಷರಗಳಿಗೆ, ದಾಖಲೆಗಳಿಗೆ ಮಹತ್ವ ಕೊಡಲು ಆರಂಭಿಸಿದ್ದೇವೆ. ಆದ್ದರಿಂದಲೇ ಮಕ್ಕಳು ಆದಷ್ಟು ಬೇಗ ಓದು ಬರಹವನ್ನು ಕಲಿಯಲಿ ಎಂದು ಅಪೇಕ್ಷೆಪಡುತ್ತೇವೆ. ಕಲಿಕೆಯ ಚಕ್ರವು ಹೇಗಿರುತ್ತದೆ ಎಂದರೆ, ಓದುವುದು ಮತ್ತು ಅದನ್ನು ಬಾಯಿಪಾಠ ಮಾಡಿಕೊಂಡು ಬರೆಯುವ ಮೂಲಕ, ಪರೀಕ್ಷೆಯನ್ನು ಎದುರಿಸುವುದಕ್ಕೆ ತಕ್ಕಷ್ಟು ಮಾತ್ರ ಮಕ್ಕಳನ್ನು ಸಿದ್ಧಮಾಡುವ ರೀತಿಯಲ್ಲಿ ಇರುತ್ತದೆ. ಸುಮಾರು ಐದಾರು ತರಗತಿಗಳನ್ನು ದಾಟುವ ಹೊತ್ತಿಗೆ ಮಕ್ಕಳು ಓದುವ ಮತ್ತು ಬರೆಯುವ ಕೌಶಲವನ್ನು ಕಲಿತುಬಿಡುತ್ತಾರೆ. ಈ ಅವಧಿಯಲ್ಲಿ ಅವರು ಕೌಶಲಗಳನ್ನು ಎಷ್ಟು ವೇಗವಾಗಿ ಕಲಿಯುತ್ತಾರೋ, ಮುಂದಿನ ಹಂತದ ಕಲಿಕೆಯಲ್ಲಿ ಅಷ್ಟೇ ವೇಗವಾಗಿ ಅವರಿಗೆ ಕೌಶಲಗಳನ್ನು ಕಲಿಸುವ ಅವಕಾಶ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬಹಳವೇ ಕಡಿಮೆ. ಅದೂ ಆಂಗ್ಲ ಮಾಧ್ಯಮ ಶಿಕ್ಷಣ ವ್ಯವಸ್ಥೆ ವಿಸ್ತಾರವಾದಂತೆ, ಇತರ ಕೌಶಲಗಳ ಕಲಿಕೆಯ ಅವಕಾಶಗಳು ಕಡಿಮೆಯಾದವು ಎನಿಸುತ್ತದೆ.

ಕೌಶಲವೆಂದರೆ ಅದು ನಮ್ಮ ಬೆರಳುಗಳ ಸಾಮರ್ಥ್ಯವನ್ನು ವಿಸ್ತರಿಸುತ್ತದೆ. ಕಣ್ಣುಗಳನ್ನು ಸೂಕ್ಷ್ಮವಾಗಿಸುವ, ಮಿದುಳಿನಲ್ಲಿ ಲೆಕ್ಕಾಚಾರ ಮಾಡುವ, ಅನ್ವಯಿಸುವಿಕೆಯ ಸಾಮರ್ಥ್ಯವನ್ನು ಚುರುಕುಗೊಳಿಸುವಂತಹುದು.

ಸೂಜಿಗೆ ದಾರ ಪೋಣಿಸುವುದು ಮತ್ತು ಬಟ್ಟೆ ಹೊಲಿಯುವ ಪ್ರಕ್ರಿಯೆಯನ್ನೇ ಗಮನಿಸಿ. ಹೊಲಿಗೆಯು ಜೀವನದಲ್ಲಿ ಮುಂದಕ್ಕೆ ಅಗತ್ಯ ಕೌಶಲ ಅಲ್ಲದೇ ಇರಬಹುದು. ಆದರೆ ಅದರ ಕಲಿಕೆಯ ಪ್ರಕ್ರಿಯೆಯಂತೂ ಮಕ್ಕಳ ಮನಸ್ಸನ್ನು ಚುರುಕಾಗಿಸುತ್ತದೆ. ನೂಲು ಮತ್ತು ಬಟ್ಟೆಯ ಬಣ್ಣ, ಹೊಂದಾಣಿಕೆಯನ್ನು ಗಮನಿಸುವುದು, ಎಷ್ಟು ದಪ್ಪದ ಬಟ್ಟೆಗೆ ಎಂತಹ ನೂಲನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬೆಲ್ಲ ವಿಚಾರಗಳು ಕಲಿಕೆಯ ಆಗಿರುತ್ತವೆ. ಉದಾಹರಣೆಗೆ, ತೆಳುವಾದ ಬಟ್ಟೆಗೆ ತೇಪೆ ಹಾಕಲು ದಪ್ಪನೆಯ ಬಟ್ಟೆಯನ್ನು ಬಳಸುವಂತಿಲ್ಲ. ಅದು ತೆಳ್ಳಗಿನ ಬಟ್ಟೆ ಮತ್ತಷ್ಟು ಕಿತ್ತು ಹೋಗುವಂತೆ ಮಾಡುತ್ತದೆ.

ನೂಲಿನ ಬಣ್ಣಗಳ ಆಯ್ಕೆ ಸಂದರ್ಭದಲ್ಲಿ, ಎಷ್ಟೊಂದು ಬಣ್ಣಗಳಿವೆ ಈ ಜಗತ್ತಿನಲ್ಲಿ ಎಂಬ ವಿಸ್ಮಯ ಮೂಡುವುದು. ಯಾವ ಬಟ್ಟೆಗೆ ಯಾವ ಬಣ್ಣ ಹೊಂದುವುದು ಎಂಬ ಹೊಂದಾಣಿಕೆಯ ಲೆಕ್ಕಾಚಾರವೂ ಅಷ್ಟೇ ಕಸರತ್ತಿನದು. ಹೊಲಿಗೆಯ ಶೈಲಿಯಲ್ಲಿ ಹಲವಾರು ವಿಧಗಳಿವೆ. ಕಂಬ ಹೊಲಿಗೆ, ಅಂಚು ಹೊಲಿಗೆ, ಗಟ್ಟಿ ಹೊಲಿಗೆ, ಬಳ್ಳಿ ಹೊಲಿಗೆ, ದಾರ ಹೊಲಿಗೆ, ಚಿತ್ತಾರದ ಹೊಲಿಗೆ... ಎಂತಹ ಬಟ್ಟೆಗೆ ಯಾವ ರೀತಿಯ ಹೊಲಿಗೆ ಬಿಗಿಯಾಗಿ ನಿಲ್ಲುತ್ತದೆ ಎಂಬುದನ್ನೂ ಅಂದಾಜು ಮಾಡಬೇಕು. ಅಂಚಿನ ಹೊಲಿಗೆಗೆ ಬಳಸುವ ನೂಲು ಹಗುರವಿದ್ದರೆ ಒಳ್ಳೆಯದು. ಗಟ್ಟಿ ಹೊಲಿಗೆಗೆ ಬಳಸುವ ನೂಲು ಎರಡೆಳೆ ಹಾಕುವಷ್ಟು ಭದ್ರವಾದುದು ಆಗಿರಬೇಕು. ಚಿತ್ತಾರದ ಹೊಲಿಗೆಗೆ ಆರೆಳೆ ದಾರದ ಬಳಕೆ ಸರಿ.

ಸಾಮಾನ್ಯವಾಗಿ ಹೈಸ್ಕೂಲ್‌ನಲ್ಲಿ ಹಿಂದೆಲ್ಲ ಈ ಕುರಿತ ಪಾಠಗಳಿದ್ದವು. ಇಂದಿನ ಮಕ್ಕಳು ತಮ್ಮ ಶಿಕ್ಷಣ ಮುಗಿಸಿ, ಭಾರೀ ಸಂಬಳ ಪಡೆಯುವ ಹುದ್ದೆ ಗಿಟ್ಟಿಸಿಕೊಂಡು, ಈ ಹೊಲಿಗೆಯ ಕೌಶಲದ ಅಗತ್ಯವೇ ಪ್ರಾಯೋಗಿಕ ಮಟ್ಟದಲ್ಲಿ ಬರದೇ ಇರಬಹುದು. ಆದರೆ ಈ ಆಯ್ಕೆಯ ಪ್ರಕ್ರಿಯೆ, ಸೂಕ್ಷ್ಮಗಳು ಅವರ ಮನಸ್ಸನ್ನು ರೂಪುಗೊಳಿಸಲು ನೆರವಾಗುತ್ತವೆ.

ಗಂಟುಗಳನ್ನು ಹಾಕುವ ಪ್ರಕ್ರಿಯೆಯ ಉದಾಹರಣೆ ಗಮನಿಸಿ. ಎರಡು ದಾರ ಅಥವಾ ಹಗ್ಗಗಳಿದ್ದಾಗ ಗಂಟುಗಳನ್ನು ಹೇಗೆ ಹಾಕಿದರೆ ಬಿಗಿಯಾಗುವುದು? ದಾರವು ಬಹಳ 'ನೈಸ್' ಆಗಿದ್ದಾಗ ಗಂಟು ಬಿಗಿಯಾಗಲು ಅಂಟು ಬಳಸುವುದು ಹೇಗೆ? ಒಂದೇ ದಾರವಿದ್ದಾಗ ಗಂಟು ಹಾಕುವುದು ಹೇಗೆ? ಬಾಗಿಲಿಗೆ ಕಟ್ಟುವ ತೋರಣದ ತುದಿಗೆ ಯಾವ ರೀತಿಯ ಗಂಟು ಅಥವಾ ಉರುಳು ಹಾಕಿದರೆ ಅದನ್ನು ಮುಂದಿನ ಬಾರಿ ಸಲೀಸಾಗಿ ಬಿಡಿಸಬಹುದು? ಮಗುವಿನ ಸೊಂಟಕ್ಕೆ ಹಾಕುವ ಕಪ್ಪು ಉಡುದಾರ ನೂಲಿಗೆ ಗಂಟು ಹಾಕುವ ವಿಧಾನ ಯಾವುದು? ಹೀಗೆ ಎಷ್ಟೊಂದು ವಿಧಾನಗಳಿವೆ. ಇಂತಹ ಪಾಠಗಳು ಈಗ ಶಿಕ್ಷಣ ಕ್ರಮದಲ್ಲಿ ಇಲ್ಲದೇ ಇರಬಹುದು, ಮನೆಯಲ್ಲಿ ಹಿರಿಯರಿಗೆ ಗೊತ್ತಿರುವ ಕೌಶಲವನ್ನು ಮಕ್ಕಳಿಗೆ ಹೇಳಿಕೊಡುವುದು ಉತ್ತಮ ಅಲ್ಲವೇ.

ಕೌಶಲಗಳು ಕೆಲಸ ಮಾಡುವಾಗ ದೊರೆಯುವ ಖುಷಿಯನ್ನು ಗುರುತಿಸಲು ಸಹಾಯ ಮಾಡುತ್ತವೆ. ಕೌಶಲದ ಪಟ್ಟಿಗೆ ಅಡುಗೆ, ಹೂ ಕಟ್ಟುವುದು, ರಂಗೋಲಿ ಬಿಡಿಸುವುದು, ಮನೆಯ ಸ್ವಚ್ಛತೆ... ಎಲ್ಲವೂ ಸೇರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in